ಹಾಕ್ತಾ ಇರೋರು, ಸರ್ವಧರ್ಮ ಸಮಭಾವದ ಬೋಧನೆ ಮಾಡುವ ಸಂಸ್ಥೆಗಳು, ಅಹಿಂಸೆ ಮತ್ತು ಸಹಬಾಳ್ವೆಯ ಬೋಧನೆ ಮಾಡುವ ಸಂಸ್ಥೆಯನ್ನು ನಡೆಸುವವರು ಒಂದೆ, ಎರಡೆ? ನಮ್ಮ ದೇಶದಲ್ಲೇ ಪ್ರತಿ ನಗರದಲ್ಲಿ "ಸುಲಭ ಶೌಚಾಲಯ" ಕಟ್ಟಿಸ್ತಾ ಇರೋ "ಸುಲಭ್ ಇಂಟರ್‌ನ್ಯಾಶನಲ್" ಸಂಸ್ಥೆಗೂ ಈ ಪುರಸ್ಕಾರ ಸಿಕ್ಕಿದೆ. ಗಾಂಧೀಜಿ ಅಂದರೆ ಜಗತ್ತು ಕಂಡ ಅತ್ಯಂತ ಶ್ರೇಷ್ಠ ಪರಿಸರವಾದಿ ಆಗಿದ್ದರು. ಅಷ್ಟೇ ಶ್ರೇಷ್ಠ ಸಮಾಜಚಿಂತಕ ಆಗಿದ್ದರು, ಅಧ್ಯಾತ್ಮ ಚಿಂತಕರಾಗಿದ್ದರು, ಪತ್ರಕರ್ತ ಆಗಿದ್ದರು; ರಾಜಕೀಯ ಮುತ್ಸದ್ದಿ ಆಗಿದ್ದರು; ಅತ್ಯಂತ ಆದರ್ಶ ಧಾರ್ಮಿಕ ನಾಯಕ ಆಗಿದ್ದರು.

**ಅವಳು:** ಅದಕ್ಕೇ ಅಲ್ವಾ, "ಇಂಥ ಒಬ್ಬ ವ್ಯಕ್ತಿ ನಿಜಕ್ಕೂ ಜೀವಂತ ಇದ್ರು, ಈ ಭೂಮಿಯ ಮೇಲೆ ಓಡಾಡ್ತಾ ಇದ್ರು ಅಂತ ಭವಿಷ್ಯದ ಪೀಳಿಗೆಯ ಜನರನ್ನ ನಂಬಿಸೋದೇ ಕಷ್ಟ" ಅಂತ ಸ್ವತಃ ಆಲ್ಬರ್ಟ್ ಐನ್‌ಸ್ಟೀನ್ ಹೇಳಿದ್ದು?

**ಮಗು:** ಅದೇನೊ ಬಾಲಿ ದೇಶದ ಹೈಸ್ಕೂಲ್ ಹುಡುಗೀರ ಕತೆ ಹೇಳ್ತೀನಿ ಅಂದಿದ್ರಿ...

**ಅವನು:** ಹೋ... ಮರೆತೇ ಇಲ್ಲವಾ ನೀನು? ತುಂಬ ಚೆನ್ನಾಗಿದೆ ಆ ಕತೆ! ಬಾಲಿ ಅನ್ನೋದು ದೇಶ ಅಲ್ಲ; ಇಂಡೊನೇಶ್ಯ ರಾಷ್ಟ್ರದ ಒಂದು ಸುಂದರ ದ್ವೀಪ ರಾಜ್ಯ. ಅಲ್ಲಿ ಪ್ಲಾಸ್ಟಿಕ್ ಹಾವಳಿ ಎಷ್ಟು ಜಾಸ್ತಿ ಅಂದ್ರೆ ಲಕ್ಷಗಟ್ಟಲೆ ಟನ್ ಪ್ಲಾಸ್ಟಿಕ್ ರಾಶಿ. ಹಳ್ಳದಲ್ಲಿ, ಹೊಂಡದಲ್ಲಿ, ಸಮುದ್ರ ತೀರದಲ್ಲಿ ಅಲ್ಲಿ ಇಲ್ಲಿ ಎಲ್ಲಾ. ಎಷ್ಟೂ ಅಂದರೆ ಪ್ರತಿ ದಿನವೂ 14 ಅಂತಸ್ತಿನ ಕಟ್ಟಡದಷ್ಟು ಎತ್ತರದ ರಾಶಿ ಆಗುವಷ್ಟು! ಅದನ್ನು ನೋಡಿ ನೋಡಿ ರೇಜಿಗೆ ಹುಟ್ಟಿ ಇಬ್ಬರು ಹೈಸ್ಕೂಲ್ ಹುಡುಗೀರು – ಅಕ್ಕತಂಗೀರು – ಅವರ ಹೆಸರು ಮೆಲಾತಿ ಮತ್ತು ಇಸಾಬೆಲ್ ಅಂತ... 'ಬೈ ಬೈ ಪ್ಲಾಸ್ಟಿಕ್ ಬ್ಯಾಗ್ಸ್' ಅಂತ ಚಳವಳಿ ಆರಂಭ ಮಾಡಿದರು. ಭಾಷಣ ಮಾಡಿದರು, ಪ್ರಾರ್ಥನೆ ಮಾಡಿದರು, ಸಹಿ ಸಂಗ್ರಹ ಮಾಡಿದರು. ಕೊನೆಗೆ ಬಾಲಿಯ ರಾಜ್ಯಪಾಲರಿಗೆ ಹೇಳಿ ಪ್ಲಾಸ್ಟಿಕ್ಕಿಗೆ ನಿಷೇಧ ಹಾಕಿಸಬೇಕು ಅಂತ ಹೊರಟರು. ಆದರೆ, ರಾಜ್ಯಪಾಲರಿಗೆ ಇವರನ್ನು ಭೇಟಿ ಮಾಡೋಕೆ ಟೈಮೇ ಇಲ್ಲ! ಆರು ತಿಂಗಳ ಕಾಲ ಸತಾಯಿಸಿದರು. ಈ ಮಧ್ಯೆ ಈ ಹುಡುಗೀರು ಇಬ್ರೂ ಭಾರತಕ್ಕೆ ಪ್ರವಾಸಕ್ಕೆ ಅಪ್ಪ ಅಮ್ಮನ ಜೊತೆ ಬಂದ್ರು. ಗಾಂಧೀ ಮ್ಯೂಸಿಯಮ್ಮಿಗೂ ಹೋಗಿದ್ರು. ಆಗ ಅವರಿಗೆ ಬಾಪೂಜಿಯ ಸರಳ ಜೀವನ ವಿಧಾನ, ಸತ್ಯಾಗ್ರಹ, ಉಪವಾಸ ಸತ್ಯಾಗ್ರಹ ಎಲ್ಲ ಗೊತ್ತಾಯ್ತು. ಬಾಲಿಗೆ ಮರಳಿ ಹೋಗಿ ಉಪವಾಸ ಸತ್ಯಾಗ್ರಹಕ್ಕೆ ಕೂತ್ರು.

**ಮಗು:** ಓ! ಗ್ರೇತಾ ಥನ್‌ಬರ್ಗ್ ಅನ್ನೋ ಹುಡುಗಿ ಒಬ್ಬಳೇ ಹೋಗಿ ಸ್ವೀಡನ್ ಸಂಸತ್ತಿನ ಕಟ್ಟಡದ ಹೊರಗಡೆ ಮುಷ್ಕರಕ್ಕೆ ಕೂತು ಇಡೀ ಜಗತ್ತಿನ ಗಮನ ಸೆಳೆದಳಲ್ಲ... ಹಾಗೇನೇ ಅಲ್ವಾ? ಆಮೇಲೆ?

**ಅವನು:** ಆಮೇಲೆ... ಬಾಲಿಯ ಜನರಿಗೆ ಸತ್ಯಾಗ್ರಹ, ಉಪವಾಸ ಮುಷ್ಕರ ಅನ್ನೋದು ಹೊಸಾ ವಿಷಯ! ಇಬ್ಬರು ಮಕ್ಕಳು ಗವರ್ನರ್ ಬಂಗ್ಲೆ ಎದುರು ಉಪವಾಸ ಕೂತಿದ್ದಾರೆ ಅಂತ ಎಲ್ಲಾ ಮಾಧ್ಯಮಗಳಲ್ಲೂ ಬಂತು. ಪೇಪರಿನಲ್ಲಿ, ರೇಡಿಯೊದಲ್ಲಿ, ಟಿವಿಲಿ... ಅವರು ಯಾವ ಆದರ್ಶಕ್ಕೆ ಈ ಸತ್ಯಾಗ್ರಹ ಮಾಡ್ತಾ ಇದಾರೆ ಅನ್ನೋದು ರಾಜ್ಯಪಾಲರ ಗಮನಕ್ಕೂ ಬಂತು. ಈ ಹುಡುಗೀರನ್ನು ಒಳಗೆ ಕರೆದು, ಅವರ ಅರ್ಜಿಯನ್ನು ನೋಡಿ ಪ್ಲಾಸ್ಟಿಕ್ ನಿಷೇಧ ಕಾನೂನು ಜಾರಿಗೆ ಬರಬೇಕು ಅಂತ ಅಪ್ಪಣೆ ಕೊಡಿಸಿದರು. ಹುಡುಗೀರ ಜೊತೆಗೂಡಿ ತಾನೂ 'ಬೈ ಬೈ ಪ್ಲಾಸ್ಟಿಕ್' ಅಂತ ಘೋಷಣೆ ಕೂಡ ಕೂಗಿದರು. ಈಗ ಅಲ್ಲಿ ಪ್ಲಾಸ್ಟಿಕ್ ಹಾವಳಿ ಕಮ್ಮಿ ಆಗ್ತಾ ಇದೆ. ಹಳ್ಳಗುಂಡಿ ಎಲ್ಲ ಕ್ಲೀನ್ ಆಗ್ತಾ ಇವೆ.